‘ಸುಳ್ಳು!? ನಂ ತಾಯಾಣೆ ನಾನ್ಯಾವತ್ತೂ ಸುಳ್ಳು ಹೇಳಿಲ್ಲ. ಈಗ ಸುಳ್ಳು ಹೇಳ್ತೀನಾ...’ ಬೇಸರಗೊಂಡ ಡೆನಿಸ್ ಕಣ್ಣು ಮೂಗು ಉಜ್ಜಿಕೊಂಡು ಗೊಣಗಿದ. ‘ನೀವೇ ಹೇಳಿ ಸ್ವಾಮಿ, ಗಾಳಕ್ಕೆ ತೂಕ ಕಟ್ದೆ ಯಾರಿಗಾದರೂ ಆಳದಲ್ಲಿರೋ ಮೀನು ಹಿಡಿಯೋಕ್ಕಾಗತ್ತಾ? ಗಾಳಕ್ಕೆ ಎರೇನೋ, ಹುಳಾನೋ ಸಿಕ್ಸಿ ತೂಕ ಕೊಡ್ದೆ ನೀರಿಗ್ ಹಾಕಿದ್ರೆ ಅದು ಕೆಳಕ್ಹೋಗುತ್ತಾ?... ನಾನು ಸುಳ್ಳು ಹೇಳ್ತೀನಾ?’ ಡೆನಿಸ್ ಹುಳ್ಳಗೆ ನಕ್ಕ. ‘ಈಗ ನಾವು ನೀರಿಗ್ ಹಾಕೋ ಗಾಳಕ್ ಸಿಕ್ಸಿರೋ ಹುಳ ನೀರ ಮೇಲೇ ಮಿಸಕಾಡ್ತಿದ್ರೆ ಅದ್ರಿಂದ ಏನು ಪ್ರಯೋಜನ? ಪರ್ಚ್, ಪೈಕ್ ಮತ್ತೆ ಈಲ್ ಪೌಟ್ ಮೀನುಗಳು ಯಾವಾಗ್ಲೂ ನೀರಿನ್ ಕೆಳ್ಗೇನೇ ಈಜೋದು. ಅವು ನೀರಿನ ಮೇಲ್ಗಡೆ ಬರಲ್ಲ. ನೀರ ಮೇಲೆ ಮೇಲೆ ಮಿಸುಕಾಡೋ ಎರೇನ ಶಿಲಿಸ್ಪರ್ ಮೀನು ಮಾತ್ರ ಕಚ್ಕೋದು. ಅದು ಯಾವಾಗ್ಲೂ ಸಿಗಲ್ಲ. ಮತ್ತೆ... ನಮ್ ಕಡೆ ಇರೋ ಚಿಕ್ಕ ಚಿಕ್ಕ ನದೀಲೆಲ್ಲಾ ಈ ಶಿಲಿಸ್ಪರ್ ಇಲ್ವೇ ಇಲ್ಲ... ನಿಮಗ್ಗೊತ್ತಾ ಅದಕ್ ತುಂಬಾ ತುಂಬಾ ದೊಡ್ಡ ನದೀನೇ ಆಗಬೇಕು... ತುಂಬಾ ನೀರಿನ ಹರಿವು ಬೇಕು...’

‘ಇಲ್ಯಾಕಯ್ಯಾ ನೀನು ಶಿಲಿಸ್ಪರ್ ಬಗ್ಗೆ ಹೇಳ್ತಿದ್ದೀಯಾ?’

‘ಯಾ...ಕಾ? ಏನು ಯಾಕೆ? ನೀವೇ ತಾನೆ ಕೇಳಿದ್ದು? ನಟ್ಯಾಕೆ ಅಂತ? ಒಳ್ಳೇ ತಮಾಷೆ ಇದು... ನಮ್ಕಡೆ ದೊಡ್ಡೋರು ಚಿಕ್ಕೋರು, ಎಲ್ರೂ ಹಾಗೇನೆ ಮೀನು ಹಿಡಿಯೋದು. ಈಗೀಗ ಬರ್ತಿರೋ ಚಿಕ್ಕಪುಟ್ಟ ಪಡ್ಡೆ ಹುಡುಗ್ರೂ ಕೂಡಾ

